ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2023–24

ದಿನಾಂಕ:04–10–2023

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಅರವತ್ತ ಎಂಟನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 30–09–2023 ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದಿತ್ತು. ಈ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದ್ದು ಅವಗಾಹಿಸಲು ಕೋರಿದೆ.

ಈ ಪತ್ರದ ದಿನಾಂಕದಿಂದ 10 ದಿನಗಳೊಳಗೆ ಯಾವುದೇ ಆಕ್ಷೇಪಣೆಗಳು (ಲಿಖಿತ/ಇ–ಮೇಲ್ ಮೂಲಕ) ಸ್ವೀಕೃತವಾಗದಿದ್ದಲ್ಲಿ ನಡಾವಳಿಗಳು ಮಾನ್ಯ ಸದಸ್ಯರಿಂದ ಅಂಗೀಕೃತವಾಗಿವೆ ಎಂದು ಭಾವಿಸಲಾಗುವುದು.

ವಂದನೆಗಳೊಂದಿಗೆ,

ಡಾ. ರೂಪಶ್ರೀ ಎಸ್. ಕಳಸೇ
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಇವರಿಗೆ:

1. ಅಪರ ಮುಖ್ಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ –ಸದಸ್ಯರು
3. ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) –ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
5. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
6. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರ್ರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
7. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ ನಗರ, ಬೆಳಗಾವಿ – 19 – ಸದಸ್ಯರು

ಪ್ರತಿಗಳು:

1. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001
2. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
3. ಕಛೇರಿ ಪ್ರತಿ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय
श्री चामराजेन्द्र संस्कृत महाविद्यालयस्य परिस
पम्पमहाकविमार्गः, चामराजपेटे, बेङ्गलूरु – ५६००१

## ದಿ: 30.09.2023ರಂದು ನಡೆದ ಪ್ರಶಾಸನ ಸಮಿತಿಯ 68ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಅರವತ್ತ ಏಳನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 30-09-2023** ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು. ಸಭೆಯಲ್ಲಿ ಈ ಕೆಳಗಿನವರು ಹಾಜರಿದ್ದರು.

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀಮತಿ ಶೀತಲ್ ಎಮ್. ಹಿರೇಮಠ, ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
3. ಶ್ರೀಮತಿ ಉಮಾ ಕೆ., ಜಂಟಿ ಕಾರ್ಯದರ್ಶಿಗಳು ಹಣಕಾಸು ಇಲಾಖೆ – ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
5. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
6. ಶ್ರೀ ಯತಿರಾಜ, ಹೆಚ್. ಕ್ಯೂ. ಎ, ಆಯುಕ್ತರ ಕಛೇರಿ, ಮುಜರಾಯಿ ಇಲಾಖೆ – ಸದಸ್ಯರು
7. ಡಾ. ರೂಪಶ್ರೀ ಎಸ್., ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. – ಸದಸ್ಯ ಕಾರ್ಯದರ್ಶಿಗಳು

**ಗೈರು ಹಾಜರಾದವರು:**

1. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ ನಗರ, ಬೆಳಗಾವಿ – 19 – ಸದಸ್ಯರು
2. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ. ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| 01 | **ಪ್ರಶಾಸನ ಸಮಿತಿ 67ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 67ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 24.07.2023ರಂದು ನಡೆಯಿತು.<br>1. ಸಭೆಯ ನಿರ್ಣಯದ ವಿಷಯ ಸಂಖ್ಯೆ 13ರಲ್ಲಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸಿನಂತೆ ಮಂಗಳಾ ಎಂ. ಅಡುಗೆ ಸಹಾಯಕರು ಇವರಿಗೆ ಅಡುಗೆ ಸಹಾಯಕರ ಹುದ್ದೆಯಿಂದ 'ಅಡುಗೆಯವರ' ಹುದ್ದೆಗೆ ಪದೋನ್ನತಿ ನೀಡಲು ಅನುಮೋದಿಸಲಾಗಿತ್ತು. ಆದರೆ ಇವರ ನೇಮಕಾತಿಯ ಬಗ್ಗೆ ಲೆಕ್ಕ ತಪಾಸಣಾ ವರದಿಯಲ್ಲಿ ಆಕ್ಷೇಪಣೆಗಳಿದ್ದು, ಈ ವಿಷಯವು ಇಲಾಖಾ ಪದೋನ್ನತಿ ಸಮಿತಿಯ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಮಂಗಳಾ ಎಂ. ಅಡುಗೆ ಸಹಾಯಕರು ಇವರಿಗೆ ಪದೋನ್ನತಿ ನೀಡುವ ಬಗ್ಗೆ ಮನಃ ಪರಿಶೀಲಿಸಬೇಕಿರುತ್ತದೆ. |

| | |
|---|---|
| | 2. ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡುವ ಬಗೆಗಿನ ವಿಷಯ ಸಂಖ್ಯೆ: 32ರಲ್ಲಿ ಆನಂದ ಜ್ಞಾನ ವಿಜ್ಞಾನ ಪರಿಷತ್ ಟ್ರಸ್ಟ್, ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ, ಕೆ. ಆರ್. ನಗರ ಈ ಸಂಸ್ಥೆಯ ಮನವಿಯಂತೆ ಇದನ್ನು ಕೈಬಿಡಲಾಗಿದೆ.<br>3. ವಿಷಯ ಸಂಖ್ಯೆ 33ರಲ್ಲಿ ಪ್ರೊ. ಎಂ. ಶ್ರೀನಿವಾಸ್ ಮೂರ್ತಿ ಎಂಬುದನ್ನು ಪ್ರೊ. ಎಂ. ಶ್ರೀಧರಮೂರ್ತಿ ಎಂದು ತಿದ್ದುಪಡಿಯೊಂದಿಗೆ ಸಂದರ್ಶಕ ಉಪನ್ಯಾಸಕರ ನೇಮಕಾತಿ ಮಾಡಲಾಗಿದೆ.<br>ಉಳಿದಂತೆ ಕೈಗೊಳ್ಳಲಾದ ನಿರ್ಣಯದ ಅನುಪಾಲನೆಗಳನ್ನು ಸಿದ್ಧಪಡಿಸಿ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.<br>(ಅನುಬಂಧ-01) |
| **ನಿರ್ಣಯ** | **ಕ್ರಮ ಸಂಖ್ಯೆ 1 ಕ್ಕೆ ಸಂಬಂಧಿಸಿದಂತೆ, ಮಂಗಳಾ ಎಂ. ಅಡುಗೆ ಸಹಾಯಕರು ಇವರಿಗೆ ಅಡುಗೆ ಸಹಾಯಕರ ಹುದ್ದೆಯಿಂದ 'ಅಡುಗೆಯವರ' ಹುದ್ದೆಗೆ ಪದೋನ್ನತಿ ನೀಡಲು ಅನುಮೋದಿಸಲಾಗಿತ್ತು. ಆದರೆ ಇವರ ನೇಮಕಾತಿಯ ಬಗ್ಗೆ ಲೆಕ್ಕ ತಪಾಸಣಾ ವರದಿಯಲ್ಲಿ ಆಕ್ಷೇಪಣೆಗಳಿದ್ದು, ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯ ಮುಂದೆ ಸೂಕ್ತ ಸಮಜಾಯಿಷಿಯೊಂದಿಗೆ ಅನುಪಾಲನೆಯನ್ನು ಸಲ್ಲಿಸಿ, ಸದರಿ ಆಕ್ಷೇಪಣೆಯನ್ನು Audit Para ದಿಂದ ಕೈಬಿಟ್ಟ ನಂತರ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.**<br>**ಕ್ರಮ ಸಂಖ್ಯೆ 2 ಮತ್ತು 3ನ್ನು ಹಾಗೂ ಪ್ರಶಾಸನ ಸಮಿತಿ 67ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.** |
| **02** | **2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದ ಮೂಲಕ ಹಣಕಾಸು ವ್ಯವಹಾರಗಳನ್ನು ಮಾಡುತ್ತಿದೆ. ಹಣಕಾಸಿನ ವ್ಯವಹಾರಗಳನ್ನು ಇ-ಟೆಂಡರ್ ಮೂಲಕ ಆಯ್ಕೆಯಾಗಿರುವ M/S. D.N Joshi & Co. ಇವರಿಂದ ನಿರ್ವಹಿಸಲಾಗುತ್ತಿದೆ. ಸದರಿಯವರು 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ದಪಡಿಸಿ ಸಲ್ಲಿಸಿದ್ದಾರೆ. ಸಲ್ಲಿಸಿರುವ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಮಂಡಿಸಿದೆ. ಅನುಮೋದನೆಯ ನಂತರ ಲೆಕ್ಕ ಪರಿಶೋಧನೆಗಾಗಿ ರಾಜ್ಯ ಲೆಕ್ಕ ಪರಿಶೋಧನಾಧಿಕಾರಿಗಳನ್ನು ಆಹ್ವಾನಿಸಲಾಗುತ್ತದೆ. ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಸಭೆಯ ಮುಂದೆ ಮಂಡಿಸಿದೆ. |
| **ನಿರ್ಣಯ** | **2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| **03** | **ಏಪ್ರಿಲ್ 2023 ರಿಂದ ಜುಲೈ 2023ರ ವರೆಗಿನ (04) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.**<br>ಏಪ್ರಿಲ್ 2023 ರಿಂದ ಜುಲೈ 2023ರ ವರೆಗಿನ (04) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಸಭೆಯ ಮುಂದೆ ಮಂಡಿಸಿದೆ. |
| **ನಿರ್ಣಯ** | **ಏಪ್ರಿಲ್ 2023 ರಿಂದ ಜುಲೈ 2023ರ ವರೆಗಿನ (04) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| **04** | **ನ್ಯಾಕ್‌ಗೆ ಸಂಬಂಧಿಸಿದ ಖರ್ಚು- ವೆಚ್ಚಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನ್ಯಾಕ್ ಸಿದ್ಧತೆ ಹಾಗೂ ತಂಡವು ಭೇಟಿ ಮಾಡಿದ ನಂತರ ಒಟ್ಟಾರೆ ರೂ.43,52,099/- ಖರ್ಚು- ವೆಚ್ಚಗಳನ್ನು ಮಾಡಿರುತ್ತದೆ. ಅದರ ವಿವರಗಳ ಪಟ್ಟಿಯನ್ನು ಸಲ್ಲಿಸಿದೆ. ಮುಂದುವರೆದು, ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ದಕ್ಷ ಮಾರ್ಗದರ್ಶನ ಹಾಗೂ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಹಕಾರದಿಂದ "A" ಮಾನ್ಯತೆಯನ್ನು ಪಡೆದಿರುತ್ತದೆ. ಈ |

| | |
|---|---|
| | ಅಂಶಗಳೊಡನೆ ಖರ್ಚು–ವೆಚ್ಚಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ನ್ಯಾಕ್‌ಗೆ ಸಂಬಂಧಿಸಿದ ಖರ್ಚು– ವೆಚ್ಚಗಳನ್ನು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 05 | **ಮೇಲುಕೋಟೆಯಿಂದ ಬೆಂಗಳೂರಿಗೆ ಆಗಮಿಸುವ ಹಣಕಾಸು ಅಧಿಕಾರಿಗಳ ಕಾರಿನ ಇಂಧನ ಪಾವತಿಸುವ ಬಗೆಗೆ.**<br>ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್, ಮೇಲುಕೋಟೆ ಇಲ್ಲಿನ ಕುಲಸಚಿವರು (ಆಡಳಿತ) ಇವರನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಭಾರ ಹಣಕಾಸು ಅಧಿಕಾರಿಗಳಾಗಿ ಸರ್ಕಾರವು ಅಧಿಕ ಪ್ರಭಾರದಲ್ಲಿರಿಸಿದೆ. ಇವರು ಬೆಂಗಳೂರಿಗೆ ವಿಶ್ವವಿದ್ಯಾಲಯದ ಕೆಲಸ ನಿಮಿತ್ತ ಮೇಲುಕೋಟೆಯ ಕಛೇರಿಯ ವಾಹನದಲ್ಲಿ ಬಂದು ಹೋಗುವ ವಾಹನದ ಇಂಧನ ವೆಚ್ಚ ಹಾಗೂ ಅವರ ಚಾಲಕರ ದಿನಭತ್ಯೆಯನ್ನು ಪಾವತಿಸುವ ಸಂಬಂಧ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಮೇಲುಕೋಟೆಯಿಂದ ಬೆಂಗಳೂರಿಗೆ ಆಗಮಿಸುವ ಹಣಕಾಸು ಅಧಿಕಾರಿಗಳ ಕಾರಿನ ಇಂಧನ ಪಾವತಿಸಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 06 | **ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತಹ ನಿಧಿಗಳನ್ನು ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಮಾಡುವ ಬಗೆಗೆ.**<br>ವಿಶ್ವವಿದ್ಯಾಲಯದ ಆಂತರೀಕ ಮೂಲಗಳಿಂದ ಬರುವಂತಹ ದತ್ತಿನಿಧಿ ಹಾಗೂ ಇನ್ನಿತರೆ ಠೇವಣಿಗಳನ್ನು ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಯಮಾನುಸಾರ ಠೇವಣಿ ಹೂಡುವಂತೆ ಲೆಕ್ಕ ಪರಿಶೋಧಕರು ಲೆಕ್ಕಪರಿಶೋಧನಾ ಸಮಯದಲ್ಲಿ ಆಕ್ಷೇಪಣೆ ಮಾಡಿರುತ್ತಾರೆ ಹಾಗೂ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಅದರಂತೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತಹ ನಿಧಿಗಳನ್ನು ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಮಾಡಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 07 | **ಸಂಸ್ಕೃತ ಪಾಠಶಾಲೆಯ ಎಸ್‌ಸಿ/ಎಸ್‌ಟಿ ಹಾಗೂ ಸಾಮಾನ್ಯ ಶಿಕ್ಷಕರಿಗೆ ಆಯೋಜಿಸಿದ ಸೇತುಬಂಧ–01 ಪುನಶ್ಚೇತನ ಶಿಬಿರ ಕಾರ್ಯಕ್ರಮದ ಖರ್ಚು–ವೆಚ್ಚವನ್ನು ಸ್ಥಿರೀಕರಿಸುವ ಬಗ್ಗೆ ಹಾಗೂ ಮುಂದಿನ 03 ಸೇತುಬಂಧ ಪುನಶ್ಚೇತನ ಶಿಬಿರ ಕಾರ್ಯಕ್ರಮದ ಖರ್ಚು–ವೆಚ್ಚದ ಅನುಮೋದನೆಗಾಗಿ ಕುರಿತು.**<br>ದಿನಾಂಕ:02.08.2023 ರಿಂದ ದಿನಾಂಕ:11.08.2023ರ ವರೆಗೆ ಶ್ರೀ ಸದ್ವಿದ್ಯಾ ಸಂಸ್ಕೃತ ಪಾಠಶಾಲೆ, ಶ್ರೀ ಕುಂಚಿಟಿಗರ ಮಹಾಸಂಸ್ಥಾನ ಮಠ, ತುಮಕೂರು ಇಲ್ಲಿ ನಡೆದ ಸೇತುಬಂಧ–01 ಪುನಶ್ಚೇತನ ಶಿಬಿರ ಕಾರ್ಯಕ್ರಮಕ್ಕಾಗಿ ರೂ.2,40,995/–ಗಳು ವೆಚ್ಚವಾಗಿದ್ದು, ಸ್ಥಿರೀಕರಣಕ್ಕಾಗಿ ಸಭೆಯ ಮುಂದೆ ಮಂಡಿಸಿದೆ.<br>ಮುಂದುವರೆದು, ಕ್ರಿಯಾ ಯೋಜನೆಯಲ್ಲಿ ಉಳಿಕೆ ಇರುವ ಮೊತ್ತ ರೂ. 3,59,045/– ಗಳಲ್ಲಿ ಸೇತುಬಂಧ–02, 03 ಮತ್ತು 04ರ ಪುನಶ್ಚೇತನ ಶಿಬಿರ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಇದರಲ್ಲಿ ಎಸ್‌ಸಿ/ಎಸ್‌ಟಿ ಶಿಕ್ಷಕರ ಖರ್ಚು ವೆಚ್ಚವನ್ನು SCP/TSP ಅನುದಾನದಿಂದ ಹಾಗೂ ಸಾಮಾನ್ಯ ಶಿಕ್ಷಕರಿಗೆ ಸಾಮಾನ್ಯ ಕ್ರಿಯಾ ಯೋಜನೆಯಿಂದ ಭರಿಸಲಾಗುವುದು. ಈ ಎರಡೂ ಅಂಶಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಪಾಠಶಾಲೆಯ ಎಸ್‌ಸಿ/ಎಸ್‌ಟಿ ಹಾಗೂ ಸಾಮಾನ್ಯ ಶಿಕ್ಷಕರಿಗೆ ಆಯೋಜಿಸಿದ ಸೇತುಬಂಧ–01 ಪುನಶ್ಚೇತನ ಶಿಬಿರ ಕಾರ್ಯಕ್ರಮದ ಖರ್ಚು–ವೆಚ್ಚವನ್ನು ಸ್ಥಿರೀಕರಿಸಲಾಯಿತು. ಹಾಗೂ ಮುಂದಿನ 03 ಸೇತುಬಂಧ ಪುನಶ್ಚೇತನ ಶಿಬಿರ ಕಾರ್ಯಕ್ರಮದ ಖರ್ಚು–ವೆಚ್ಚವನ್ನು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 08 | **ಸರ್ಕಾರಕ್ಕೆ ಸಲ್ಲಿಸಿರುವ SCP/TSP ಕ್ರಿಯಾ ಯೋಜನೆಯ ವಿವರಗಳನ್ನು ಘಟನೋತ್ತರ ಅನುಮೋದನೆ ಕೋರುವ ಬಗೆಗೆ.**<br>2023–24ನೇ ಸಾಲಿನ SCP/TSP ಅನುದಾನ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ, ಇದರ ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸರ್ಕಾರಕ್ಕೆ ಸಲ್ಲಿಸಿರುವ SCP/TSP ಕ್ರಿಯಾ ಯೋಜನೆಯ ವಿವರಗಳನ್ನು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 09 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಬ್ಲಾಕ್ ಗ್ರಾಂಟ್ ಖಾತೆ ಸಂಖ್ಯೆ:64140220134 ಯಲ್ಲಿರುವ ಅನುದಾನದ ಮೊತ್ತವನ್ನು ಠೇವಣಿ ಮಾಡಿರುವುದನ್ನು ಸ್ಥಿರೀಕರಿಸಲು ಹಾಗೂ** |

| | |
|---|---|
| | ಬಳಕೆ ಮಾಡಲು ಅನುಮೋದನೆಗಾಗಿ.<br>ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಬ್ಲಾಕ್ ಗ್ರಾಂಟ್ ಖಾತೆ ಸಂಖ್ಯೆ:64140220134 ರಲ್ಲಿ 592 ಲಕ್ಷಗಳು ಅನುದಾನ ಲಭ್ಯವಿದ್ದು, ಇದರಲ್ಲಿ 500 ಲಕ್ಷಗಳನ್ನು ಲೆಕ್ಕಪರಿಶೋಧಕರ ಮೌಖಿಕ ಸಲಹೆಯ ಮೇರೆಗೆ ಎಸ್.ಬಿ.ಐ ಖಾತೆಯಲ್ಲಿ ಠೇವಣಿ ಇಡಲಾಗಿದೆ. ಉಳಿಕೆ 92 ಲಕ್ಷಗಳು ಬ್ಯಾಂಕಿನ ಎಸ್.ಬಿ ಖಾತೆಯಲ್ಲಿದ್ದು, ಇದನ್ನು ನಿವೃತ್ತರಾದ ಸಂಸ್ಕೃತ ಪಾಠಶಾಲಾ ಶಿಕ್ಷಕರುಗಳಿಗೆ ಗಳಿಕೆ ರಜೆ ನಗದೀಕರಣ ಹಾಗೂ ಬಾಕಿ ಬಿಲ್‌ಗಳನ್ನು ಪಾವತಿಸಲು ನಿರ್ದೇಶನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಕ್ರಮವಹಿಸಲಾಗುವುದು. ಈ ಅಂಶವನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಬ್ಲಾಕ್ ಗ್ರಾಂಟ್ ಖಾತೆ ಸಂಖ್ಯೆ:64140220134 ಯಲ್ಲಿರುವ ಅನುದಾನದ ಮೊತ್ತವನ್ನು ಠೇವಣಿ ಮಾಡಿರುವುದನ್ನು ಸ್ಥಿರೀಕರಿಸಲಾಯಿತು ಹಾಗೂ ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಕ್ರಮವಹಿಸಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| **10** | **ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ನಡೆದ ಇಲಾಖಾ ವಿಚಾರಣೆಯ ಕುರಿತು.**<br>ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ) ಇವರು ಅನಧಿಕೃತವಾಗಿ 20.01.2020ರಿಂದ ಅನಧಿಕೃತವಾಗಿ ಸೇವೆಗೆ ಗೈರು ಹಾಜರಾಗಿದ್ದು, ಈ ಬಗ್ಗೆ ಇವರ ವಿರುದ್ಧ ಅನುಬಂಧ 1-4 ಜಾರಿಗೊಳಿಸಿ, ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಆದೇಶಿಸಿ ಸದರಿಯವರಿಗೆ ನೋಟೀಸ್ ಜಾರಿ ಮಾಡಿದ್ದು, ದಿ: 19.09.2023ರಂದು ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯ ವರದಿ ಸಲ್ಲಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಸೇಇವಿ 2001, ದಿ: 14.09.2001ರ ಕಂಡಿಕೆ 02ರಂತೆ ಮತ್ತು ಸಿ.ಸಿ.ಎ. ನಿಯಮ 8 (vii) ರಂತೆ ಈ ಬಗ್ಗೆ ಮುಂದಿನ ಕ್ರಮ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ವಿಚಾರಣಾ ವರದಿಯ ಪ್ರತಿಯನ್ನು ರವಾನಿಸಲು ನಿರ್ಣಯಿಸಲಾಯಿತು.** |
| **11** | **ಪಾರುಲ್ ವಿಶ್ವವಿದ್ಯಾಲಯದ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳುವ ಬಗೆಗೆ.**<br>ಗುಜರಾತ್ ರಾಜ್ಯದಲ್ಲಿನ ವಡೋದರದಲ್ಲಿರುವ ಪಾರುಲ್ ವಿಶ್ವವಿದ್ಯಾಲಯವು ನ್ಯಾಕ್ ಎ++ ಮಾನ್ಯತೆ ಪಡೆದಿದ್ದು, ಎಲ್ಲಾ ಶೈಕ್ಷಣಿಕ ವಿಭಾಗಗಳಲ್ಲಿ ಮುಂಚೂಣಿಯಲ್ಲಿದೆ. ಈ ವಿಶ್ವವಿದ್ಯಾಲಯದಲ್ಲಿ ಸುಮಾರು 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಈ ವಿಶ್ವವಿದ್ಯಾಲಯದ ಆಯುರ್ವೇದ ವಿಭಾಗವು ಆಯುರ್ವೇದ ಸಂಹಿತೆಗಳ ಆಡಿಯೋ ಪುಸ್ತಕ ಬಿಡುಗಡೆ ಮಾಡಲು ಯೋಚಿಸುತ್ತಿದೆ. ಮೂಲ ಸಂಸ್ಕೃತದಲ್ಲಿರುವ ಈ ಸಂಹಿತೆಗಳು ಲಕ್ಷಾಂತರ ಆಯುರ್ವೇದ ವೈದ್ಯರಿಗೆ ಅನುಕೂಲಕರವಾಗುತ್ತವೆ. ಅಷ್ಟೇ ಅಲ್ಲದೆ ಇತರ ಸಂಸ್ಕೃತದ ಶಾಸ್ತ್ರೀಯ ಪುಸ್ತಕಗಳನ್ನು ಕೂಡ ಇ-ಸಂಹಿತೆಗಳನ್ನಾಗಿ/ಆಡಿಯೋ ಪುಸ್ತಕಗಳನ್ನಾಗಿ ಮಾಡಲು ಸಾಧ್ಯತೆಗಳಿರುತ್ತವೆ. ಇ-ಪುಸ್ತಕಗಳಿಗೆ/ಆಡಿಯೋ ಪುಸ್ತಕಗಳಿಗೆ ಬೇಕಾಗಿರುವ ಪದದ ಉಚ್ಛಾರಣೆ, ಛಂದಸ್ಸು, ಸಂಧಿ, ಸಮಾಸದ ಆಳವಾದ ಜ್ಞಾನ ನಮ್ಮ ವಿಶ್ವವಿದ್ಯಾಲಯದ ಬೋಧಕರಲ್ಲಿರುತ್ತದೆ. ಹಾಗಾಗಿ ಇದು ವಿಶ್ವವಿದ್ಯಾಲಯಕ್ಕೆ ಅನುಕೂಲಕರವಾಗಲಿದೆ. ಆದುದರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪಾರುಲ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ಈ ವಿಷಯವನ್ನು ಪ್ರಶಾಸನ ಸಮಿತಿಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಗುಜರಾತ್ ರಾಜ್ಯದಲ್ಲಿನ ವಡೋದರದಲ್ಲಿರುವ ಪಾರುಲ್ ವಿಶ್ವವಿದ್ಯಾಲಯದ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| **12** | **ವೇದಾಂತ ಭಾರತೀ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆಯನ್ನು ನೀಡುವ ಬಗೆಗೆ.** |

| | |
|---|---|
| | ವೇದಾಂತ ಭಾರತೀ, ಸಿ. ಎಮ್. ರೋಡ್, ಕೆ.ಆರ್. ನಗರ, ಮೈಸೂರು ಜಿಲ್ಲೆ – 571602 ಈ ಸಂಸ್ಥೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಕೋರಿದ್ದು, ಸದರಿ ಸಂಸ್ಥೆಯು ಪ್ರಸ್ತಾವನೆಯನ್ನು ಪರಿಶೀಲಿಸಿ ದಿ: 28.06.2023ರಂದು ತಪಾಸಣಾ ಸಮಿತಿಯು ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿ ವರದಿ ಸಲ್ಲಿಸಿದೆ. ಈ ಕೇಂದ್ರವು ಸಂಶೋಧನೆಗೆ ಪೂರಕವಾದ ಪೀಠೋಪಕರಣ, ಸಂಗಣಕ ವಿಭಾಗ, ಸುಸಜ್ಜಿತ ಗ್ರಂಥಾಲಯ, ಪರಾಮರ್ಶನ ಗ್ರಂಥಗಳು, ನಿಯತಕಾಲಿಕಗಳು, ವಿದ್ವತ್ ಪತ್ರಿಕೆಗಳು, ಸಂಶೋಧನೆಗೆ ಪೂರಕವಾದ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದು, ಸಂಶೋಧನೆ ಮತ್ತು ಗ್ರಂಥ ಪ್ರಕಾಶನ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ 20223–24ನೇ ಸಾಲಿನಿಂದ ಮೂರು ವರ್ಷಗಳ ಅವಧಿಗೆ ಈ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ವೇದಾಂತ ಭಾರತೀ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆಯನ್ನು ನೀಡುಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 13 | **ಶ್ರೀ ಸಿದ್ಧಲಿಂಗೇಶ್ವರ ಬಿ. ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು– ಈ ಕಾಲೇಜನ್ನು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಬಗ್ಗೆ.**<br>ಸರ್ಕಾರಿ ಪತ್ರ ಸಂಖ್ಯೆ: ಇಡಿ 172 ಯುಎನ್ಇ 2022 ದಿನಾಂಕ: 09.06.2023 ರಲ್ಲಿ – "ಅಧ್ಯಕ್ಷರು, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ(ರಿ), ಇವರು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಕಾಲೇಜಿನ ಸಿಬ್ಬಂದಿಗಳಿಗೆ ಇದುವರೆಗೂ ವೇತನ ಬಿಲ್ಲನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ನೀಡಲಾಗುತ್ತಿದ್ದು, ಕಳೆದ 06 ತಿಂಗಳಿಂದ (HRMS) ಜಾರಿಗೆ ತಂದಿರುವುದರಿಂದ ಪ್ರಸ್ತುತ ಉನ್ನತ ಶಿಕ್ಷಣ ಇಲಾಖೆಯಿಂದ ವೇತನ ಬಿಲ್ಲನ್ನು ನೀಡಲಾಗುತ್ತಿದೆ. ಈ ಕಾಲೇಜಿಗನ ಶೈಕ್ಷಣಿಕ ಹಾಗೂ ಆಡಳಿತ ಕರಲಸಗಳ ವೇತನ ಬಿಲ್ಲುಗಳು ಸಂಸ್ಕೃತ ವಿಶ್ವವಿದ್ಯಾಲಯದಿಂದ ಆಗುತ್ತಿಲ್ಲವಾದ್ದರಿಂದ, ಕಾಲೇಜಿನ ಹಿತದೃಷ್ಟಿಯಿಂದ ಈ ಕಾಲೇಜನ್ನು ಸಂಸ್ಕೃತ ವಿಶ್ವವಿದ್ಯಾಲಯದಿಂದ ಬೇರ್ಪಡಿಸಿ ಉನ್ನತ ಶಿಕ್ಷಣ ಇಲಾಖೆಗೆ ಸೇರಿಸಬೇಕೆಂದು ಕೋರಿರುತ್ತಾರೆ.<br>ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ(ರಿ), ಶ್ರೀ ಸಿದ್ಧಗಂಗಾ ಮಠ ಇದರ ವತಿಯಿಂದ ಅನುದಾನಿತವಾಗಿ ನಡೆಯುತ್ತಿರುವ ಶ್ರೀ ಸಿದ್ಧಲಿಂಗೇಶ್ವರ ಬಿ. ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜಿನ ಸಿಬ್ಬಂದಿ ವೇತನ ಬಿಲ್ಲನ್ನು ಉನ್ನತ ಶಿಕ್ಷಣ ಇಲಾಖೆ (ಯೋಜನೆ)ಯ ಮೂಲಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದಲೇ HRMS ಮೂಲಕ ನೀಡಲಾಗುತ್ತಿದೆ.<br>ಆದ್ದರಿಂದ ಉಲ್ಲೇಖಿತ ಪತ್ರದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈ ಕಾಲೇಜಿಗೆ ಯಾವುದೇ ವೇತನ, ಶೈಕ್ಷಣಿಕ ಹಾಗೂ ಆಡಳಿತ ಕಾರ್ಯಗಳನ್ನು ನಡೆಸದೇ ಇರುವುದರಿಂದ ಈ ಕಾಲೇಜನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಬೇರ್ಪಡಿಸಿ ಉನ್ನತ ಶಿಕ್ಷಣ ಇಲಾಖೆಗೆ ಸೇರಿಸಬೇಕೆಂದು ಕೋರಿರುವುದರಿಂದ, ಸದರಿ ಕಾಲೇಜಿನ ವೇತನ, ಶೈಕ್ಷಣಿಕ ಮತ್ತು ಆಡಳಿತ ಕಾರ್ಯಗಳನ್ನು ಯಾವ ವಿಶ್ವವಿದ್ಯಾಲಯವು ನಡೆಸುತ್ತಿದೆ ಎಂಬ ಮಾಹಿತಿಯೊಂದಿಗೆ ಸದರಿ ಕಾಲೇಜನ್ನು ತುಮಕೂರು ಮತ್ತು ಸಂಸ್ಕೃತ ವಿಶ್ವವಿದ್ಯಾಲಯಗಳಿಂದ ಬೇರ್ಪಡಿಸಿ ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಕೋರಿಕೆಯ ಕುರಿತು ನಮ್ಮ ವಿಶ್ವವಿದ್ಯಾಲಯದಿಂದ ಸ್ಪಷ್ಟ ಅಭಿಪ್ರಾಯ ನೀಡುವಂತೆ ಕೋರಿರುತ್ತಾರೆ.<br>ಶ್ರೀ ಸಿದ್ಧಲಿಂಗೇಶ್ವರ ಬಿ. ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಶ್ರೀ ಸಿದ್ಧಗಂಗಾಮಠ, ತುಮಕೂರು– ಈ ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳು ತುಮಕೂರು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟಿದ್ದು, ಆಡಳಿತ ಮತ್ತು ವೇತನ ಚಟುವಟಿಕೆಗಳು ಮಾತ್ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟಿರುತ್ತವೆ. ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು– ಈ ಕಾಲೇಜಿಗೆ ಯಾವುದೇ ವೇತನ (Salary through HRMS), ಶೈಕ್ಷಣಿಕ ಹಾಗೂ ಆಡಳಿತ ಕಾರ್ಯಗಳನ್ನು ನಡೆಸದೇ ಇರುವುದರಿಂದ ಈ ಕಾಲೇಜನ್ನು ಸಂಸ್ಕೃತ ವಿಶ್ವವಿದ್ಯಾಲಯದಿಂದ ಬೇರ್ಪಡಿಸಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಸಂಬಂಧ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಬಗ್ಗೆ ಸಮಿತಿಯನ್ನು ರಚಿಸಿ ವರದಿ ಪಡೆಯುವಂತೆ ತೀರ್ಮಾನಿಸಲಾಯಿತು. ಸಮಿತಿಯ ಅಧ್ಯಕ್ಷತೆಯನ್ನು ಪ್ರೊ. ವೀರನಾರಾಯಣ ಪಾಂಡುರಂಗಿ, ಡೀನ್, ವೇದಾಂತ ನಿಕಾಯ ಮತ್ತು ಸದಸ್ಯರಾಗಿ** |

| | |
|---|---|
| | **ಪ್ರೊ. ಶ್ರೀಧರ ಶಾಸ್ತ್ರಿ, ಪ್ರಶಾಸನ ಸಮಿತಿ ಸದಸ್ಯರು, ಪ್ರೊ. ಶ್ರೀಕಾಂತ ಪುರೋಹಿತ, ಪ್ರಶಿಕ್ಷಣ ಸಮಿತಿ ಸದಸ್ಯರು ಮತ್ತು ಸಂಚಾಲಕರಾಗಿ ಡಾ. ವೆಂಕಟೇಶ ವಿ, ಸಹಾಯಕ ಕುಲಸಚಿವರು ಇವರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಸದರಿ ಸಮಿತಿಯು ಶ್ರೀ ಸಿದ್ದಲಿಂಗೇಶ್ವರ ಬಿ. ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಶ್ರೀ ಸಿದ್ದಗಂಗಾಮಠ, ತುಮಕೂರು ಇಲ್ಲಿಗೆ ಭೇಟಿ ನೀಡಿ ಈ ಕಾಲೇಜನ್ನು ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಉಳಿಸಿಕೊಳ್ಳಲು ಅಥವಾ ವಿಶ್ವವಿದ್ಯಾಲಯದಿಂದ ಬೇರ್ಪಡಿಸಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಸಂಬಂಧ ವರದಿಯನ್ನು ಸಲ್ಲಿಸಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 14 | **ಪ್ರೊ. ವೀರನಾರಾಯಣ ಎನ್. ಕೆ. ಪಾಂಡಿರಂಗಿ, ವೇದಾಂತ ನಿಕಾಯಾಧ್ಯಕ್ಷರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ "Immersive study of Yajnas of Taittiriya and Aitareya Brahmanas" ಎಂಬ ಯೋಜನೆಗೆ ಅನುಮತಿ ನೀಡುವ ಬಗ್ಗೆ.**<br>ಪ್ರೊ. ವೀರನಾರಾಯಣ ಎನ್. ಕೆ. ಪಾಂಡಿರಂಗಿ ಇವರು ದಿ: 08.08.2023ರ ತಮ್ಮ ಪ್ರಸ್ತಾವನೆಯಲ್ಲಿ "ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ ನಾಲ್ಕನೆಯ ಅಧ್ಯಾಯದಲ್ಲಿ ಸಂಸ್ಕೃತ ಮತ್ತು ವೇದಗಳಲ್ಲಿ ಉನ್ನತ ಮಟ್ಟದ ಬೋಧನೆ ಮತ್ತು ಸಂಶೋಧನೆ, ಪಾರಂಪರಿಕ ಅಧ್ಯಯನವನ್ನು ಉತ್ತೇಜಿಸುವುದು, ವೇದಗಳ ಅನುವಾದ/ಪ್ರಕಾಶನ, ವೇದಗಳ ಆಡಿಯೋ ಮತ್ತು ವೀಡಿಯೋ ದಾಖಲೀಕರಣ ಮೊದಲಾದವು ವಿಶ್ವವಿದ್ಯಾಲಯದ ಉದ್ದೇಶವಾಗಿವೆ. ಈ ಉದ್ದೇಶಗಳನ್ನು ಪೂರ್ಣಗೊಳಿಸಲು ನಾನು ವೈದಿಕ ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದು ಇವುಗಳಲ್ಲಿ ಅನೇಕ ಗ್ರಂಥಗಳು ಪಾಠ್ಯಕ್ರಮವಾಗಿವೆ. ಈಗಾಗಲೇ ವಿಶ್ವವಿದ್ಯಾಲಯವು ಋಗ್ವೇದದ ಅಧ್ಯಯನ ಮತ್ತು ನೂತನ ವ್ಯಾಖ್ಯಾನ ಯೋಜನೆಗೆ ಅನುಮತಿ ನೀಡಿದೆ. ತತ್ವಸಂಶೋಧನ ಸಂಸತ್, ಉಡುಪಿ ಇದರ ಸಹಯೋಗದಲ್ಲಿ ಈಗಾಗಲೇ ಎರಡು ಸಂಪುಟಗಳನ್ನು ಪ್ರಕಾಶಿಸಲಾಗಿದೆ.<br>ಪ್ರಸ್ತುತ, ತೈತ್ತರೀಯ ಮತ್ತು ಐತರೇಯ ಬ್ರಾಹ್ಮಣ ಗ್ರಂಥಗಳಲ್ಲಿ ಹೇಳಿದ ಯಜ್ಞಗಳ ಬಗ್ಗೆ ಅಧ್ಯಯನದ ಅವಶ್ಯಕತೆಯಿದೆ. ಋಗ್ವೇದ ಸಂಹಿತೆಯಲ್ಲಿನ ಹೆಚ್ಚಿನ ಮಂತ್ರಗಳು ಯಜ್ಞಗಳೊಂದಿಗೆ ಸಂಬಂಧಿಸಿವೆ. ಇದರ ಅಧ್ಯಯನಕ್ಕಾಗಿ ರಾಜ್ಯಾದ್ಯಾಂತ ವಿವಧ ಯಜ್ಞಗಳಲ್ಲಿ ಆರ್ತ್ವಿಜ್ಯ ವಹಿಸಿ, ಸ್ವಯಂ ಯಜ್ಞಗಳನ್ನು ಆಚರಿಸಬೇಕಿದೆ. ಇದು ಕರ್ತವ್ಯದ ದಿನಗಳಲ್ಲಿ ಹೆಚ್ಚಿನ ಅವಧಿಯನ್ನು ಅಪೇಕ್ಷಿಸುತ್ತದೆ. ಆಗಾಗ್ಗೆ ಪ್ರಯಾಣವನ್ನೂ ಕೈಗೊಳ್ಳಬೇಕಾಗುತ್ತದೆ. ವಿಶ್ವವಿದ್ಯಾಲಯವು ಸಂಶೋಧಕರಿಗೆ ಮತ್ತು ತಂಡಕ್ಕೆ ಈ ಬಗ್ಗೆ ಅನ್ಯ ಕರ್ತವ್ಯ ರಜೆಯನ್ನು ನೀಡಬೇಕು. ಮತ್ತು ಈ ಯೋಜನೆಗೆ ವಿಶ್ವವಿದ್ಯಾಲಯದಿಂದ ಯಾವುದೇ ಆರ್ಥಿಕ ಸಹಯೋಗ ಬೇಡ" ಎಂದು ಪ್ರಸ್ತಾವನೆ ಸಲ್ಲಿಸಿದ್ದು, ಈ ಯೋಜನೆಗೆ ಅನುಮತಿಯನ್ನು ನೀಡುವ ಬಗ್ಗೆ ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **UGC ನಿಯಮಾವಳಿಯನ್ವಯ ಸದರಿಯವರಿಗೆ 30 ದಿನಗಳ ಕಾಲ OOD ಸೌಲಭ್ಯಕ್ಕೆ ಅವಕಾಶವಿರುತ್ತದೆ. ವೇತನ ಸಹಿತವಾಗಿ 30 ದಿನಗಳಿಗಿಂತ ಹೆಚ್ಚಿನ ಅವಧಿಗೆ ಅವಕಾಶವಿಲ್ಲವೆಂದು ಪ್ರಶಾಸನ ಸಮಿತಿಯ ಸಭೆಯು ತೀರ್ಮಾನಿಸಿತು.** |
| 15 | **"ಪರಮಲಘುಮಂಜೂಷಾ" ಗ್ರಂಥದ ಕನ್ನಡಾನುವಾದದ ಪ್ರಕಾಶನದ ಬಗ್ಗೆ.**<br>ಡಾ. ವನಿತಾ ರಾಮಸ್ವಾಮಿ, ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು ಹಾಗೂ ಮಾಜಿ ಸಿಂಡಿಕೇಟ್ ಸದಸ್ಯರು ಇವರು "ಸಂಸ್ಕೃತ ವ್ಯಾಕರಣದಲ್ಲಿ ಪರಮಲಘುಮಂಜೂಷಾ ಗ್ರಂಥವು ಬಹಳ ಪ್ರಧಾನವಾದದ್ದು. 17ನೇ ಶತಮಾನದಲ್ಲಿ ನಾಗೇಶಭಟ್ಟ ಪ್ರಣೀತವಾದ ಈ ಗ್ರಂಥವು ಸಂಸ್ಕೃತ ವಿಶ್ವವಿದ್ಯಾಲಯದಲ ಪಾಠ್ಯಪುಸ್ತಕವೂ ಆಗಿದೆ. ಆದರೆ ಇದು ಕಠಿಣವಾಗಿರುವುದರಿಂದ ವಿದ್ಯಾರ್ಥಿಗಳು ಅಧ್ಯಯನದಲ್ಲಿ ಕಷ್ಟವನ್ನನುಭವಿಸುತ್ತಿದ್ದಾರೆ. ಆದ್ದರಿಂದ ಇದರ ಕನ್ನಡ ಅನುವಾದವು ಅತ್ಯವಶ್ಯಕವಾಗಿದೆ. ಅನೇಕ ವರ್ಷಗಳ ಸತತ ಪ್ರಯತ್ನದಿಂದ ವಿಮರ್ಶಾತ್ಮಕ ಅಧ್ಯಯನದೊಂದಿಗೆ ಕನ್ನಡ |

| | |
|---|---|
| | ಅನುವಾದವನ್ನು ಸಿದ್ಧಪಡಿಸಿದ್ದು ಇದನ್ನು ಸಂಸ್ಕೃತ ವಿಶ್ವವಿದ್ಯಾಲದ ವತಿಯಿಂದ ಪ್ರಕಾಶಿಸಬೇಕು" ಎಂದು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.<br>"ಪರಮಲಘುಮಂಜೂಷಾ" ಗ್ರಂಥದ ಕನ್ನಡಾನುವಾದದ ಪ್ರಕಾಶನದ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **"ಪರಮಲಘುಮಂಜೂಷಾ" ಗ್ರಂಥದ ಕನ್ನಡಾನುವಾದವನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ನಿಗದಿತ ಆಯವ್ಯಯದಲ್ಲಿ ಪ್ರಕಾಶನ ಮಾಡಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 16 | **ಸಂಜೆಯ ಅವಧಿಯಲ್ಲಿ MA –ವೇದಾಂತ ಕೋರ್ಸನ್ನು ಪ್ರಾರಂಭಿಸುವ ಬಗ್ಗೆ.**<br>ವಿಶ್ವವಿದ್ಯಾಲಯದಲ್ಲಿ 2021–22ನೇ ಸಾಲಿನಿಂದ ಸಂಜೆ ಕಾಲೇಜಿನಲ್ಲಿ BA – ಸಂಸ್ಕೃತ ಕೋರ್ಸನ್ನು ಪ್ರಾರಂಭಿಸಿದ್ದು, 2023–24ನೇ ಸಾಲಿನಲ್ಲಿ BA – ಸಂಸ್ಕೃತ ಮೂರನೇ ವರ್ಷದ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದಾರೆ. ಇವರಲ್ಲಿ ವೇದಾಂತ – **MA** ಓದಲು ವಿದ್ಯಾರ್ಥಿಗಳ ಬೇಡಿಕೆ ಹೆಚ್ಚಿರುವುದರಿಂದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವೇದಾಂತ ವಿಭಾಗದಡಿಯಲ್ಲಿ ಹಾಲಿ ನಡೆಯುತ್ತಿರುವ MA – ವೇದಾಂತ ಕೋರ್ಸನ್ನು ದಿನದ ಅವಧಿಯ ಜೊತೆಗೆ ಸಂಜೆಯ ಅವಧಿಯಲ್ಲಿ ಪ್ರಾರಂಭಿಸಲು ಪಾಠ್ಯಕ್ರಮ ಮತ್ತು ಅಧ್ಯಾಪಕರ ಅಳವಡಿಕೆಯ ವಿಷಯದಲ್ಲಿ ವಿಭಾಗವು ಸಿದ್ಧತೆಯನ್ನು ಮಾಡಿಕೊಂಡಿದೆ. ಆದ್ದರಿಂದ ಪ್ರಸ್ತುತ ಸಾಲಿನಿಂದ ಸಂಜೆಯ ಅವಧಿಯಲ್ಲಿ MA –ವೇದಾಂತ ಕೋರ್ಸನ್ನು ಪ್ರಾರಂಭಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಂಜೆಯ ಅವಧಿಯಲ್ಲಿ MA –ವೇದಾಂತ ಕೋರ್ಸನ್ನು ಪ್ರಾರಂಭಿಸಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 17 | **ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸಗಳನ್ನು ಆರಂಭಿಸುವ ಬಗ್ಗೆ.**<br>ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಹಲವು ವಿಭಾಗಗಳಡಿಯಲ್ಲಿ ವಿವಿಧ ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸಗಳನ್ನು ನಡೆಸಲಾಗುತ್ತಿದೆ. ಪ್ರಸ್ತುತ ಈ ಕೆಳಗಿನ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸಗಳನ್ನು ಆರಂಭಿಸಲು ವಿದ್ಯಾರ್ಥಿಗಳ ಮತ್ತು ಸಂಸ್ಕೃತಾಸಕ್ತರ ಬೇಡಿಕೆಯಿದೆ. |

## List of Certificate Courses

| S.N | Department | | Name of the Course |
|---|---|---|---|
| 1 | Vedanta | 1 | Certificate Course in Bhagavata |
| | | 2 | Certificate Course in Advaita Vedanta |
| | | 3 | Certificate Course in Jaina Siddhanta |
| | | 4 | Certificate Course in Dvaita Vedanta |
| | | 5 | Certificate Course in Bhagavadgita |
| | | 6 | Certificate Course in Vivekachudamani |
| | | 7 | Certificate Course in Upanishad |
| | | 8 | Certificate Course in Buddhist Studies |
| 2 | Language and Literature | 9 | Certificate Course in Functional Samskrit |
| | | 10 | Certificate Course in Samskrita Kavya |
| | | 11 | Certificate Course in Kannada Kavya |
| | | 12 | Certificate Course in Pali |
| | | 13 | Certificate Course in Purana |
| | | 14 | Certificate Course in Sthotra |
| 3 | Manuscriptology | 15 | Certificate Course in Manuscriptology |
| | | 16 | Certificate Course in Bramhi Lipi |
| | | 17 | Certificate Course in Tigalari Lipi |

| | | | |
|---|---|---|---|
| | | 18 | Certificate Course in Nandinagari Lipi |
| | | 19 | Certificate Course in Grantha Lipi |
| | | 20 | Certificate Course in Sharada Lipi |
| 4 | Yoga Therapy and Counselling | 21 | Certificate Course in Yoga |
| | | 22 | Certificate Course in Sholka Siddi |
| 5 | Nyaya and Vaisheshika | 23 | Certificate Course in Nyaya shastra |
| | | 24 | Certificate Course in Nyayabodhini |
| 6 | Vyakarana | 25 | Certificate Course in Ashtadhyayi pravesha |
| 7 | Jyotishya | 26 | Certificate Course in Jyotishya |
| | | 27 | Certificate Course in Hastasamudrika |
| | | 28 | Certificate Course in Vastu |
| 8 | Indian Knowledge Studies | 29 | Certificate Course in Science in Samskrit |

**Additional certificate courses**

| SL. No | Course Name |
|---|---|
| 1 | Certificate Course in Bhavadgeeta management |
| 2 | Certificate Course in Stotrapradeepa |
| 3 | Certificate Course in Purana |
| 4 | Certificate Course in Dasasahitya |
| 5 | Certificate Course in Geetadarsha |
| 6 | Certificate Course in Bharatiya Kavya Mimamsa |

List of Diploma Courses

| S.N | Department | Name of the Course |
|---|---|---|
| 1 | Library | Diploma in Library Information |
| 2 | Dr. B.R. Ambedkar Research Centre | Diploma in Ambedkar Studies |
| 3 | Mahabodhi Socity | Diploma in Buddhist Studies |
| 4 | Yoga Therapy and Counselling | Diploma in Yoga |
| 5 | Jyotishya | Diploma in Jyotishya |
| | | Diploma in Hastasamudrika |
| | | Diploma in Vastu |

List of P.G.Diploma Courses

| S.N | Department | Name of the Course |
|---|---|---|
| 1 | Manuscriptology | P.G. Diploma in Manuscriptology |
| 2 | Yoga Therapy and Counselling | P.G. Diploma in Yoga |
| 3 | Jyotishya | P.G.Diploma in Jyotishya |
| | | P.G.Diploma in Hastasamudrika |
| | | P.G.Diploma in Vastu |
| 4 | Vyakarana | P.G.Diploma in Sanskrit computational linguistic |

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಯಾ ವಿಭಾಗದಡಿಯಲ್ಲಿ ವಿಶ್ವವಿದ್ಯಾಲಯ ಮತ್ತು ಮಾನ್ಯತೆ ಪಡೆದ

| | |
|---|---|
| | ಸಂಶೋಧನ ಕೇಂದ್ರಗಳಲ್ಲಿ ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸಗಳನ್ನು ಸಮಯಾನುಸಾರ ಆರಂಭಿಸಲು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಪಿ. ಜಿ. ಡಿಪ್ಲೋಮಾ ಕೋರ್ಸಗಳನ್ನು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಮತ್ತು ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಆರಂಭಿಸಲು ಪ್ರಶಾಸನ ಸಮಿತಿಯ ಸಭೆಯು ಅನುಮೋದಿಸಿತು.** |
| 18 | **ಶ್ರೀ ಮಂಜುನಾಥ ಕೋಟಿ, ಕಾವಲುಗಾರ (ಡಿ ಗ್ರೂಪ್) ಇವರನ್ನು ಕಿರಿಯ ವಾಹನ ಚಾಲಕ ಹುದ್ದೆಗೆ ಮೇಲ್ದರ್ಜೆಗೇರಿಸಿರುವ ಬಗ್ಗೆ.**<br>ಶ್ರೀ ಮಂಜುನಾಥ ಕೋಟಿ ಇವರು 2013ರಲ್ಲಿ ಕಾವಲುಗಾರ (ಡಿ ಗ್ರೂಪ್) ಆಗಿ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡಿದ್ದು, ಆಗ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳ ವಾಹನಕ್ಕೆ ಚಾಲಕರ ಕೊರತೆಯಿತ್ತು. ಶ್ರೀ ಮಂಜುನಾಥ ಕೋಟಿಯವರಿಗೆ ವಾಹನ ಚಾಲನೆಯ ನೈಪುಣ್ಯ ಮತ್ತು ಅರ್ಹತೆಯಿರುವುದರಿಂದ ಕಾಲೇಜು ಶಿಕ್ಷಣ ಇಲಾಖೆಯ ಸುತ್ತೋಲೆಯಲ್ಲಿನ ಕ್ರಮವನ್ನು ಅನುಸರಿಸಿ ಪ್ರಶಾಸನ ಸಮಿತಿಯ ಅನುಮೋದನೆಯ ಮೇರೆಗೆ ಸದರಿಯವರ ಹುದ್ದೆಯನ್ನು ಕಿರಿಯ ವಾಹನ ಚಾಲಕ ಹುದ್ದೆಗೆ ಉನ್ನತೀಕರಿಸಲಾಗಿದೆ. ಆದರೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಈ ಬಗ್ಗೆ ಅವಕಾಶವಿಲ್ಲದಿರುವುದರಿಂದ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಿದ್ದು ವಸೂಲಾತಿಗೆ ಸೂಚಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಮುಂದೂಡಲಾಯಿತು.** |
| 19 | **ಶ್ರೀ ಚಂದ್ರಶೇಖರ ಪಾಟೀಲ, ಹಿರಿಯ ಸಹಾಯಕರು ಇವರಿಗೆ ಶಾಖಾಧಿಕಾರಿ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.**<br>ಹಿರಿಯ ಸಹಾಯಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಚಂದ್ರಶೇಖರ ಸಿ. ಪಾಟೀಲ್ ಇವರ ನೇಮಕಾತಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಬೆಂಗಳೂರು ಇವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2019-20 ಮತ್ತು 2020-21ನೇ ಸಾಲಿನ Audit report ನಲ್ಲಿ ಆಕ್ಷೇಪಣೆ ನೀಡಿ, ನೀಡಿರುವ ಆರ್ಥಿಕ ಸೌಲಭ್ಯಗಳನ್ನ ವಸೂಲಾತಿಗೆ ಸೂಚಿಸಿರುತ್ತಾರೆ. C & R ನಂತೆ ಇವರು 05 ವರ್ಷ ಪೂರೈಸಿದ್ದರೂ ಸಹ ಲೆಕ್ಕಪರಿಶೋಧನೆಯ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಆಕ್ಷೇಪಣೆಗಳು ಇತ್ಯಾರ್ಥಗೊಂಡ ನಂತರ ಸೂಕ್ತ ಕ್ರಮಕೈಗೊಳ್ಳಲು ಇಲಾಖಾ ಪದೋನ್ನತಿ ಸಮಿತಿಯು ಸೂಚಿಸಿದೆ. ದಿ: 27.07.2023ರಂದು ನಡೆದ ಪ್ರಶಾಸನ ಸಮಿತಿಯ 67ನೇ ಸಭೆಯಲ್ಲಿ Audit ಆಕ್ಷೇಪಣೆಗಳು ಇತ್ಯಾರ್ಥಗೊಂಡ ನಂತರ ಕ್ರಮ ವಹಿಸಲು ನಿರ್ಣಯಿಸಲಾಗಿರುತ್ತದೆ. ಈ ಬಗ್ಗೆ ಸರ್ಕಾರದ ನಿರ್ದೇಶನದ ಅವಶ್ಯಕತೆಯಿರುವುದರಿಂದ ಶ್ರೀ ಚಂದ್ರಶೇಖರ ಸಿ. ಪಾಟೀಲ್ ಇವರ ಪದೋನ್ನತಿಯ ಬಗ್ಗೆ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಮುಂದೂಡಲಾಯಿತು.** |

**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಬೆಂಗಳೂರು – 560018**

**ಕುಲಪತಿಗಳು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.